## ಮಾಗಡಿ ತಾಲ್ಲೂಕಿನಲ್ಲಿ ಶಿಕ್ಷಕರ ಸಂಖ್ಯೆ

೬೨೦. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಪ್ರಾಥಮಿಕ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಗಡಿ ತಾಲ್ಲೂಕು ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

(ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಪ್ರಾಥಮಿಕ ೭೦೨ ಪ್ರಾಥಮಿಕ ೬೫

(ಆ) ಪ್ರಾಥಮಿಕ ೧೫೨ ಪ್ರಾಥಮಿಕ ೯

(ಇ) ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು.

## ರಾಜ್ಯದಲ್ಲಿ ಎಣ್ಣೆ ಬೀಜಗಳ ಉತ್ಪಾದನೆಯನ್ನು ಹೆಚ್ಚಿಸುವ ಬ

೬೧೨ ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ).— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಎಣ್ಣೆ ಬೀಜಗಳ ಉತ್ಪಾದನೆ ಪ್ರತಿವರ್ಷ ಎಷ್ಟಾಗುತ್ತಿದೆ ?

ಆ) ಇದನ್ನು ಹೆಚ್ಚು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್ ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಅಂದಾಜಿಸಲಾಗಿರುವ ಎಣ್ಣೆಕಾಳು ಉತ್ಪಾದನೆ ಈ ರೀತಿ ಇದೆ.

| | | |
|---|---|---|
| ೧೯೮೨-೮೩ | ... | ೧೪.೯೪ ಲಕ್ಷ ಟನ್ |
| ೧೯೮೩-೮೪ | ... | ೧೪.೦೬ ಲಕ್ಷ ಟನ್ |
| ೧೯೮೪-೮೫ | ... | ೧೫.೫೨ ಲಕ್ಷ ಟನ್ (ಅಂದಾಜು) |

ಆ) ರಾಜ್ಯದಲ್ಲಿ ಎಣ್ಣೆಕಾಳು ಉತ್ಪಾದನೆ ಹೆಚ್ಚು ಮಾಡಲು ಕೈಗೊಂಡಿರುವ ಕ್ರಮಗಳು ಯಾವುದೆಂದರೆ :—

೧) ಆಧುನಿಕ ಬೇಸಾಯ ಕ್ರಮಗಳನ್ನು ಅಳವಡಿಸಿ ಅಧಿಕ ಉತ್ಪಾದನೆ ಪಡೆಯುವುದರಲ್ಲಿ ರೈತರಿಗೆ ಮಾಹಿತಿ ಹಾಗೂ ತರಬೇತಿ ಕೊಡುವುದು.

೨) ಪ್ರಾಯೋಶ್ರಯದಲ್ಲಿ ನೂತನ ಕೃಷಿ ಬೇಸಾಯ ಕ್ರಮಗಳನ್ನು ಅನುಸರಿಸಿ ಮೇಲ್ಮಣ್ಣಿನ ಸಂರಕ್ಷಣೆಯನ್ನು ಮತ್ತು ಭೂಮಿಯಲ್ಲಿ ತೇವಾಂಶ ಕಾಪಾಡುವುದರ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸುವುದು.

೩) ಕೆರೆ, ಅಣೆಕಟ್ಟು ಹಾಗೂ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತ ಬೆಳೆಯಲು ಸಾಕಷ್ಟು ನೀರು ಇಲ್ಲದಿದ್ದರೆ ಭತ್ತದ ಬದಲು ಎಣ್ಣೆಕಾಳುಗಳನ್ನು ಆರೆ ನೀರಾವರಿ ಬೆಳೆಯಾಗಿ ಬೆಳೆಯುವುದು.

೪) ಎಣ್ಣೆಕಾಳು ಬೆಳೆಯನ್ನು ಮಿಶ್ರ ಹಾಗೂ ಬಹು ಬೆಳೆಯಲಾಗಿ ಬೆಳೆಯುವುದು ಮತ್ತು ಬೆಳೆ ಪರಿವರ್ತನೆಯಲ್ಲಿ ಪರ್ಯಾಯ ಬೆಳೆಯಾಗಿ ಅಳವಡಿಸುವುದು.

೫) ಬತ್ತದ ಕೊಯಿಲಿನ ನಂತರ ಭೂಮಿಯಲ್ಲಿನ ಉಳಿಕೆ ತೇವಾಂಶದಲ್ಲಿ ನೆಲಗಡಲೆ ಬಿಳಿಸುವುದು.

೬) ಈ ದಿಶೆಯಲ್ಲಿ ರೈತರನ್ನು ಎಣ್ಣೆಕಾಳು ಬೆಳೆಯುವ ಬಗ್ಗೆ ಉತ್ತೇಜಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ ಮತ್ತು ಎಣ್ಣೆಕಾಳು ಉತ್ಪಾದನೆ ಒತ್ತು ಯೋಜನೆಗಳಡಿಯಲ್ಲಿ ಅವರಿಗೆ ಅಧಿಕ ಇಳುವರಿ ಗುಣಮಟ್ಟದ ಬಿತ್ತನೆಬೀಜಗಳನ್ನು ಪರಿಂಗಡವಾಗಿ ಒದಗಿಸುವುದು. ಸಸ್ಯ ಸಂರಕ್ಷಣೆ ರಾಸಾಯನಿಕಗಳು ಮತ್ತು ಉಪಕರಣಗಳು, ಸುಧಾರಿತ ಕೃಷಿ ಸಲಕರಣೆಗಳು, ಪಿಪ್ಸ್‌ಗಳು, ತುಂತುರು ನೀರಾವರಿ ಯಂತ್ರಗಳು ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಿ ಕೊಡಲಾಗುತ್ತಿದೆ.

೭) ಸುಧಾರಿತ ಗುಣಮಟ್ಟದ ಎಣ್ಣೆಕಾಳು ಬಿತ್ತನೆ ಬೀಜಗಳನ್ನೊಳಗೊಂಡ ಕಿರುಚೀಲಗಳನ್ನು ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಆದ್ಯತೆ ಮೇಲೆ ಉಚಿತವಾಗಿ ವಿತರಿಸಲಾಗುವುದು.

೮) ಹಣಕಾಸಿನ ಸಂಸ್ಥೆಗಳ ಮೂಲಕ ಎಣ್ಣೆಕಾಳು ಉತ್ಪಾದನೆಗೆ ವಿಶೇಷ ಬೆಳೆಸಾಲ ಸೌಲಭ್ಯದ ವ್ಯವಸ್ಥೆ ಸಹ ಮಾಡಲಾಗಿದೆ.

## ರಾಜ್ಯದಲ್ಲಿ ಮೀನು ಉತ್ಪನ್ನಗಳ ಹೆಚ್ಚಳ

೭೫೧ ಶ್ರೀ ಎಂ ನಾರಾಯಣಸ್ವಾಮಿ (ಚೇತಮಂಗಲ).—ಮಾನ್ಯ ಬಂದರು, ಮೀನುಗಾರಿಕೆ ಮತ್ತು ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕದಲ್ಲಿ ಮೀನು ಉತ್ಪನ್ನಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಮೀನುಗಾರರಿಗೆ ಹೆಚ್ಚಿನ ಉತ್ತೇಜನ ನೀಡಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮೀನು ಉತ್ಪನಗಳ ಮಾರಾಟಕ್ಕಾಗಿ ಸಹಕಾರಿ ಸಂಘಗಳನ್ನು ರಚಿಸುವ ವಿಷಯವು ಸರ್ಕಾರದವರ ಗಮನದಲ್ಲಿದೆಯೇ,

ಇ) ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು ;

ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಮೀನುಗಾರರಿಗೆ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಮತ್ತು ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ಮೀನು ಉತ್ಪನ್ನಗಳನ್ನು ಹೆಚ್ಚಿಸಲು ಹಲವು ಯೋಜನೆಗಳನ್ನು ಕಾರ್ಯಗತ ಗೊಳಿಸಲಾಗುತ್ತಿದೆ.

೧. ಕಡಲ ಮೀನಿನ ಉತ್ಪನ್ನವನ್ನು ಹೆಚ್ಚಿಸಲು, ನಾಲ್ಕು ಮತ್ತು ಐದನೇ ಪಂಚ ವಾರ್ಷಿಕ ಯೋಜನೆಗಳ ಅವಧಿಯಲ್ಲಿ ದೋಣಿಗಳ ಯಾಂತ್ರೀಕರಣ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದ್ದು ಯಾಂತ್ರೀಕೃತ ದೋಣಿಗಳ ಸಂಖ್ಯೆ ೧೯೬೯–೭೦ನೇ ಸಾಲಿನಲ್ಲಿ ೮೦೦ ಇದ್ದು, ೧೯೮೯–೯೦ನೇ ಸಾಲಿನಲ್ಲಿ ೩,೫೦೦ ಕ್ಕೆ ಏರಿದೆ. ಮತ್ತು ಕಡಲ ಮೀನು ಉತ್ಪತ್ತಿ ೫೫,೦೦೦ ಮೆಟ್ರಿಕ್ ಟನ್‌ಗಳಿಂದ ೧,೮೫,೦೦೦ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿದೆ.

೨. ೧೯೭೦ರ ದಶಕದಲ್ಲಿ ೩೫ ನೀರಿನ ಮೀನು ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಪಶ್ಚಿಮ ಬಂಗಾಳದಿಂದ ದೊಡ್ಡಗೆಂಡೆ ಜಾತಿಯ ಮೀನು ಮರಿಗಳನ್ನು ತರಿಸಿ ಕೆರೆ ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗುತ್ತಿತ್ತು. ಮೀನು ಮರಿ ಉತ್ಪಾದನೆಯನ್ನು ರಾಜ್ಯದಲ್ಲಿ ಹೆಚ್ಚಿಸುವ ಸಲುವಾಗಿ ೮೨ ಮೀನು ಮರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಮೀನು ಮರಿ ಉತ್ಪಾದನೆಯು ೧೦ ಕೋಟಿಯಿಂದ ೩೦ ಕೋಟಿಗೆ ಹೆಚ್ಚಿಸಿದೆ.

೩. ೫ನೇ ನೀರು ಮೀನು ಉತ್ಪನ್ನವನ್ನು ಹೆಚ್ಚಿಸುವ ಸಲುವಾಗಿ, ಮೈಸೂರು ಜಿಲ್ಲೆಯಲ್ಲಿ ಎನ್.ಸಿ.ಡಿ.ಪಿ. ನೆರವಿನ ರೂ. ೪೭೩.೮೮ ಲಕ್ಷಗಳ ವೆಚ್ಚದಲ್ಲಿ ಜಲಾಶಯ ಅಭಿವೃದ್ಧಿ ಯೋಜನೆಯನ್ನು ಆಯೋಜಿಸಲಾಗುತ್ತಿದೆ. ಯುರೋಪಿನ ಆರ್ಥಿಕ ಸಮುದಾಯ ನೆರವಿನ ೯.೦೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಶಿವಮೊಗ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

೪. ಮೀನು ಉತ್ಪಾದನೆಗೆ ಮೀನು ಮರಿಗಳು ಅವಶ್ಯವಾಗಿರುವುದರಿಂದ, ಕೇಂದ್ರ ನೆರವಿನಿಂದ ಶಿವಮೊಗ್ಗ ಜಿಲ್ಲೆಯ ಬದ್ರಾದಲ್ಲಿ ಒಂದು ಹತ್ತು ಹೆಕ್ಟೇರ್ ವಿಸ್ತೀರ್ಣದ ಮೀನು ಮರಿ ಉತ್ಪಾದನಾ ಕೇಂದ್ರವನ್ನು ೫೨.೦೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಮೀನು ಮರಿ ಕೇಂದ್ರ ಪೂರ್ಣಗೊಂಡ ನಂತರ, ಐದು ಕೋಟಿ ಮೀನು ಮರಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.